

ಅರುಣ ಪಿ. ಭಟ್ಟ

## ವಾರಭವಿಷ್ಯ 08.09.2022ದಿಂದ 14.09.2022ರವರೆಗೆ




ಮನಸ್ಸು ತುಂಬಾ ಚಂಚಲತೆಯಿಂದ ಕೂಡಿರುತ್ತದೆ. ತುಂಬಾ ಸಂಯಮದಿಂದ ಇರಿ. ಹಣಕಾಸಿನ ಬಗ್ಗೆ ತುಸು ಬಿಗಿಯಾಗಿರಿ. ಮಕ್ಕಳಿಂದ ಸಂತೋಷದ ಸಮಾಚಾರ ಕೇಳುವಿರಿ. ಪುಣ್ಯಕ್ಷೇತ್ರವನ್ನು ದರ್ಶನ ಮಾಡಲಿದ್ದೀರಿ. ಕಲಾವಿದರಿಗೆ ಸಾಹಿತಿಗಳಿಗೆ ಮನ್ನಣೆ ಸನ್ಮಾನ ಯೋಗ. ಕೋರ್ಟ್ ವ್ಯಾಜ್ಯಗಳಿದ್ದರೆ ಹಿನ್ನಡೆ. ಪ್ರಯಾಣದಲ್ಲಿ ಎಚ್ಚರವಹಿಸಿ. ಶುಭದಿನ 12. ಚಂಡಿ ಪಾರಾಯಣ ಮಾಡಿರಿ.




ಈ ವಾರ ನಿಮ್ಮ ಮನಸ್ಸು ಸಾಮಾಜಿಕ ಕೆಲಸ ಮಾಡುವತ್ತ ಹೆಚ್ಚಿನ ಆಸಕ್ತಿ ಹೊಂದುತ್ತದೆ. ನಿಮ್ಮ ಸಾಮಾಜಿಕ ಕಾರ್ಯ ಅರ್ಹರಾದವರಿಗೆ ತಲುಪುತ್ತದೆ. ಇದರಿಂದ ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ, ಗೌರವ ಹೆಚ್ಚಾಗುತ್ತದೆ. ಸ್ವತಃ ನೀವೂ ಕೂಡ ನಿಮ್ಮಲ್ಲಾದ ಬದಲಾವಣೆ ಗಮನಿಸಿ ಸಂತೋಷಗೊಳ್ಳುವಿರಿ. ವಾರವಿಡೀ ಸಂತಸ ಕ್ಷಣಗಳೇ ಹೆಚ್ಚಾಗಿರುತ್ತದೆ. ಶುಭದಿನ 11. ರಾಘವೇಂದ್ರ ಸ್ವಾಮಿಗಳ ಭಜನೆ ಮಾಡಿರಿ.




ಬಂಧು ಮಿತ್ರರಲ್ಲಿ ನಿಮ್ಮ ಸ್ನೇಹ ಗಾಢವಾಗುವುದು. ದಾಯಾದಿಗಳ ಜೊತೆ ಆಸ್ತಿಗೆ ಸಂಬಂಧಿಸಿದ ವಿಷಯಗಳಲ್ಲಿ ಕಿರಿಕಿರಿ. ಪತ್ನಿಯ ಆರೋಗ್ಯ ಕೆಡುವ ಸಂಭವ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರಿಗೆ ಒಳ್ಳೆಯ ಗೌರವ ಲಭಿಸುವುದು. ಸೋದರರಿಂದ ಲಾಭ. ಮಕ್ಕಳ ವಿದ್ಯಾಭ್ಯಾಸದಲ್ಲಿ ಹಿನ್ನಡೆ. ಬ್ಯಾಂಕ್, ಕೋರ್ಟ್, ಕಚೇರಿ ವ್ಯವಹಾರಗಳಿಗೆ ಉತ್ತಮ ಸಮಯ. ಶುಭದಿನ 08. ದೇವಿ ಸ್ತೋತ್ರ ಪಠಿಸಿರಿ.




ಶ್ರಮಪಟ್ಟು ದುಡಿದು ಒಳ್ಳೆಯ ಸಂಪಾದನೆಯನ್ನು ಮಾಡುತ್ತೀರಿ. ವೈವಿಧ್ಯಮಯ ಆಭರಣ, ವಾಹನ ಖರೀದಿ ಯೋಗ ಇದೆ. ಉದ್ಯೋಗದಲ್ಲಿ ಬಡ್ತಿ ಸಿಗುವ ಸಂಭವ ಇದೆ. ಕೃಷಿ– ವ್ಯವಸಾಯದಿಂದ ಲಾಭ. ವಿದ್ಯಾ ವಿನೋದಗಳಿಂದ ಖರ್ಚು. ಮಾತೃ ಸೌಖ್ಯ. ವಿದ್ಯಾರ್ಥಿಗಳಿಗೆ ಪರಿಕ್ಷಾರ್ಥಿಗಳಿಗೆ ಶುಭ. ಬಂಧುಗಳ ಸಹಕಾರ. ಈ ವಾರ ಉತ್ತಮ ಜೀವನ. ಶುಭದಿನ 14. ದುರ್ಗಾ ಸಹಸ್ರನಾಮ ಪಠಿಸಿರಿ.




ನಿರುದ್ಯೋಗಿಗಳಿಗೆ ನೂತನ ಉದ್ಯೋಗ ಪ್ರಾಪ್ತಿ. ಮನೆಯಲ್ಲಿ ಶುಭಕಾರ್ಯ ನೆರವೇರಲಿದೆ. ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕಾಗಿ ದೂರದ ಊರಿಗೆ ಹೋಗಬಹುದು. ವಿದೇಶ ಪ್ರಯಾಣ ಯೋಗ. ಕುಟುಂಬದ ಜವಾಬ್ದಾರಿ ಹೆಚ್ಚಾಗುವುದು. ಮಕ್ಕಳಿಗೆ ಅನಾರೋಗ್ಯ ಸಂಭವ. ಸ್ತ್ರೀ ಮೂಲಕ ಧನಲಾಭ. ವೈವಾಹಿಕ ಜೀವನ ಸುಖಮಯವಾಗಿರುತ್ತದೆ. ಶುಭದಿನ 13. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ನೂತನ ಉದ್ಯೋಗ ಆರಂಭಿಸುವವರಿಗೆ ಶುಭ. ಉದ್ಯೋಗದಲ್ಲಿ ಸ್ವಯಂ ಪ್ರತಿಭೆಯಿಂದ ಮುಂದೆ ಬರುತ್ತೀರಿ. ಮನೆಯಲ್ಲಿ ಮಂಗಳ ಕಾರ್ಯ ನೆರವೇರುವ ಸಂಭವ. ವಾಹನ ವಸ್ತ್ರಾಭರಣ ಖರೀದಿ. ಸಂಗೀತ ಸಿನಿಮಾ ಕ್ಷೇತ್ರದವರಿಗೆ ಲಾಭ. ಉದ್ಯೋಗದಲ್ಲಿ ವಿರೋಧಿಗಳ ಕಾಟ. ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಒಳ್ಳೆಯ ವಾಗ್ಮಿ ಅನ್ನಿಸಿಕೊಳ್ಳುವಿರಿ. ಶುಭದಿನ 12. ವಿಷ್ಣು ಸಹಸ್ರನಾಮ ಓದಿರಿ.




ಚಂಚಲ ಮನಸ್ಸು. ಹಣ ಅನವಶ್ಯಕ ಖರ್ಚು. ಕೆಮ್ಮು, ಕಫದಿಂದ ಆರೋಗ್ಯ ಕೆಡುತ್ತದೆ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ನೌಕರರಿಗೆ ವರ್ಗಾವಣೆ ಸಂಭವ. ಕ್ರಯವಿಕ್ರಯಗಳಲ್ಲಿ ಮೋಸವಾಗುವ ಸಂಭವ ಜಾಗ್ರತೆಯಿಂದಿರಿ. ಬರತಕ್ಕ ಹಣ ಬರುವುದು. ಉದ್ಯೋಗದಲ್ಲಿ ಏರುಪೇರು. ಮಕ್ಕಳ ಆರೋಗ್ಯದ ಕಡೆ ಗಮನವಿರಲಿ. ಶುಭದಿನ 14. ಲಕ್ಷ್ಮೀನಾರಾಯಣಹೃದಯ ಪಾರಾಯಣ ಮಾಡಿರಿ.




ಜೀವನದಲ್ಲಿ ಹೊಸ ಹಾದಿಯ ಬಾಗಿಲೊಂದು ತೆರೆದುಕೊಳ್ಳುವ ಸಂಭವವಿದೆ. ಸರ್ಕಾರ ಮತ್ತು ಸಾರ್ವಜನಿಕ ಕಾರ್ಯಗಳಿಗೆ ವಿಪರೀತ ಖರ್ಚಾಗುವುದು. ತಂದೆಯ ಆರೋಗ್ಯದಲ್ಲಿ ಏರುಪೇರು. ಉದ್ಯೋಗದ ನಿಮಿತ್ತ ಪರಸ್ಥಳ ತಿರುಗಾಟ ಜಾಸ್ತಿಯಾಗಿರುವುದು. ವ್ಯಾಪಾರಸ್ಥರಿಗೆ ಉತ್ತಮ ಲಾಭ. ಆತ್ಮೀಯರಿಂದಲೇ ಮೋಸವಾಗುವ ಸಂಭವ ಎಚ್ಚರವಹಿಸಿ. ಶುಭದಿನ 12. ಶಿವ ಸಹಸ್ರನಾಮ ಓದಿರಿ.




ಕಲಾಕಾರರು ಕವಿಗಳಿಗೆ ಶುಭ. ವ್ಯವಸಾಯಗಾರರಿಗೆ ಉತ್ತಮ ಲಾಭ. ಪುಣ್ಯಕ್ಷೇತ್ರ ದರ್ಶನ. ಗುರು ಹಿರಿಯರಿಂದ ಆಶೀರ್ವಾದ ಲಭಿಸುವುದು. ಉದ್ಯೋಗದಲ್ಲಿ ಅಪರಿಚಿತರಿಂದ ತೊಂದರೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ವಾರದ ಕೊನೆಗೆ ಹಣದ ಮುಗ್ಗಟ್ಟು ಎದುರಾಗುವ ಸಂಭವ. ಕೋರ್ಟ್ ವ್ಯವಹಾರಗಳಲ್ಲಿ ಹಿನ್ನಡೆಯಾಗುತ್ತದೆ. ಶುಭದಿನ 09. ಶಂಕರ ಸ್ತೋತ್ರ ಪಠಣ ಮಾಡಿರಿ.




ಉದ್ಯೋಗದಲ್ಲಿ ಪ್ರಗತಿಯನ್ನು ಸಾಧಿಸಲಿದ್ದೀರಿ. ವಿಶೇಷ ಸಂಪಾದನೆಯ ಯೋಗ ಇರುತ್ತದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಕೊಂಚ ಹಿನ್ನಡೆ ಆಗಬಹುದು. ಹೆಂಡತಿ ಮಕ್ಕಳಿಂದ ಧನಲಾಭ. ಭೂ ವ್ಯವಹಾರದಲ್ಲಿ ನಂಬಿದವರೇ ಶತ್ರುಗಳಾಗುವರು ಎಚ್ಚರವಹಿಸಿ. ನಿಮ್ಮ ಕೈಯಿಂದ ಮಂಗಳ ಕಾರ್ಯ ನಡೆಯುವ ಸಂಭವ ಇದ್ದು ಕುಟುಂಬದಲ್ಲಿ ಸಂತಸ ಮನೆಮಾಡಲಿದೆ. ಶುಭದಿನ 12. ಸುಬ್ರಹ್ಮಣ್ಯ ಜಪ ಮಾಡಿರಿ.




ವ್ಯಾಪಾರ ವ್ಯವಹಾರದಲ್ಲಿ ಉತ್ತಮ ಲಾಭ. ದೂರ ಪ್ರಯಾಣದಲ್ಲಿ ಎಚ್ಚರಿಕೆ ವಹಿಸಿ. ದಾಯಾದಿಗಳಿಂದ ತೊಂದರೆ ಆಗಲಿದೆ. ಬಂಧುಗಳಲ್ಲಿ ಜಗಳ. ಮನೆಯಲ್ಲಿ ಸಮತೋಲನವನ್ನು ಸಂಯಮದಿಂದ ಕಾಪಾಡಿಕೊಳ್ಳಿ. ಖರ್ಚು ವೆಚ್ಚಗಳ ಬಗ್ಗೆ ನಿಗಾವಹಿಸಿ. ಪರೋಪಕಾರ ಮಾಡಲು ಹೋಗಿ ತೊಂದರೆಗೆ ಸಿಲುಕುವ ಅಪಾಯ ಇದೆ. ಶುಭದಿನ 14. ಹನುಮಾನ್ ಚಾಲಿಸ್ ಓದಿರಿ.




ಉನ್ನತ ವ್ಯಾಸಂಗಕ್ಕೆ ಯೋಗ್ಯಕಾಲ ಬರಲಿದೆ. ಆಸ್ತಿ ವಿಚಾರದಲ್ಲಿ ಜಯ ನಿಮ್ಮ ಪಾಲಿಗೆ ಒಲಿಯಲಿದೆ. ಉದ್ಯೋಗದಲ್ಲಿ ಬೆಳವಣಿಗೆ ಇದೆ. ಯಜ್ಞ ಯಾಗಾದಿ ಕಾರ್ಯಗಳಲ್ಲಿ ಭಾಗವಹಿಸುವಿರಿ. ಹೊಸ ವಸ್ತ್ರ ಖರೀದಿ. ಕುಟುಂಬದವರ ಜೊತೆ ಬಾಂಧವ್ಯ ಉತ್ತಮವಾಗಿರುತ್ತದೆ. ದೂರದ ಪ್ರವಾಸದಿಂದ ಸಂತಸವಾಗಿ ಇರಲಿದ್ದೀರಿ. ಶುಭದಿನ 09. ಸೌಂದರ್ಯಲಹರಿ ಪಠಿಸಿರಿ.